# ‘ಡಾರ್ಕ್ ವೆಬ್’ಗೆ ಗೂಗಲ್ ಕಣ್ಣು

**‘ಡಾರ್ಕ್ ವೆಬ್’ ಎಂಬ ಕತ್ತಲ ಜಗತ್ತಿನಲ್ಲಿ ನಮ್ಮ ಮಾಹಿತಿಯೂ ಅಡಗಿರಬಹುದು. ಅದನ್ನು ತಿಳಿಸುವ ಹೊಸ ಫೀಚರ್ ‘ಗೂಗಲ್ಸ್ ಡಾರ್ಕ್ ವೆಬ್ ರಿಪೋರ್ಟ್’.**

**■ ಶಶಿಕುಮಾರ್ ಸಿ.**

ಡಾರ್ಕ್ ವೆಬ್‌ನಲ್ಲಿ ನಿಮ್ಮ ವೈಯಕ್ತಿಕ ಮಾಹಿತಿ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿಯಲು ‘ಗೂಗಲ್ಸ್ ಡಾರ್ಕ್ ವೆಬ್ ರಿಪೋರ್ಟ್’ ಫೀಚರ್ ಈಗ ಲಭ್ಯ. ಇದನ್ನು ಗೂಗಲ್ ಈಚೆಗೆ ಬಿಡುಗಡೆ ಮಾಡಿದೆ. ಡಾರ್ಕ್ ವೆಬ್ ಅಥವಾ ಡಾರ್ಕ್ ನೆಟ್‌ನಲ್ಲಿ ನಿಮ್ಮ ಮಾಹಿತಿ ಅಡಗಿದೆಯೇ ಎನ್ನುವುದನ್ನು ತಿಳಿದು, ಆ ಬಗ್ಗೆ ಎಚ್ಚರಿಸುವ ಕಾಯಕ ಮಾಡುತ್ತದೆ ಈ ಫೀಚರ್.

ಗೂಗಲ್ ತನ್ನ ಬಳಕೆದಾರರ ಸುರಕ್ಷತೆ ಮತ್ತು ಭದ್ರತೆಗಾಗಿ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಲೇ ಇರುತ್ತದೆ. ತನ್ನ ಎಲ್ಲ ಆನ್‌ಲೈನ್ ವೇದಿಕೆಗಳಲ್ಲಿ ದೋಷಗಳು ನುಸುಳದಂತೆ ಎಚ್ಚರವಹಿಸುವ ಗೂಗಲ್, ಬಳಕೆದಾರರು ನಿರಾತಂಕವಾಗಿ ಬಳಸಬಹುದಾದ ಫೀಚರ್‌ಗಳನ್ನು ಪರಿಚಯಿಸುವುದರಲ್ಲಿ ಮುಂದೆ ಇರುತ್ತದೆ. ಈ ಮುನ್ನೆಚ್ಚರಿಕೆಯ ಭಾಗವಾಗಿಯೇ ಹೊಸ ಫೀಚರ್ ಪರಿಚಯಗೊಂಡಿದೆ. ಇದು ಗೂಗಲ್ ಉತ್ಪನ್ನಗಳ ಎಲ್ಲ ಖಾತೆಗಳಿಗೆ ಹೆಚ್ಚುವರಿ ಭದ್ರತೆ ಕಲ್ಪಿಸುತ್ತದೆ.




ಬಳಕೆದಾರರ ಖಾತೆಗಳಿಗೆ ಸಂಬಂಧಿಸಿದಂತೆ ಎದುರಾಗಬಹುದಾದ ಸೈಬರ್ ದಾಳಿ ಅಥವಾ ಡೇಟಾ ಉಲ್ಲಂಘನೆಗಳನ್ನು ತಡೆಯುವ ಉದ್ದೇಶದಿಂದ ‘ಡಾರ್ಕ್ ವೆಬ್ ರಿಪೋರ್ಟ್’ ರೂಪುಗೊಂಡಿದೆ. ಡಾರ್ಕ್ ವೆಬ್ ಅನ್ನು ಸ್ಕ್ಯಾನ್ ಮಾಡುವುದು ಇದರ ಕಾರ್ಯ. ಅಂದರೆ ಬಳಕೆದಾರರ ಇಮೇಲ್ ವಿಳಾಸ, ಪಾಸ್‌ವರ್ಡ್ ಸೇರಿದಂತೆ ಯಾವುದೇ ವೈಯಕ್ತಿಕ ಮಾಹಿತಿ ಆನ್‌ಲೈನ್‌ನಲ್ಲಿ ಸೋರಿಕೆಯಾಗಿದೆಯೇ ಎಂಬುದನ್ನೂ ಪರಿಶೀಲನೆ ನಡೆಸುತ್ತದೆ. ಒಂದು ವೇಳೆ ಮಾಹಿತಿ ಸೋರಿಕೆಯಾಗಿದ್ದರೆ ಆ ಬಗ್ಗೆ ಬಳಕೆದಾರರಿಗೆ ತಿಳಿಸುತ್ತದೆ.

ಡಾರ್ಕ್ ವೆಬ್‌ನಲ್ಲಿನ ಮಾಹಿತಿಯನ್ನು ಸ್ಕ್ಯಾನ್ ಮಾಡುವುದು ಜನಸಾಮಾನ್ಯರಿಗೆ ಸುಲಭದ ಮಾತಲ್ಲ. ಸ್ಕ್ಯಾನ್ ಮಾಡಲು ವಿಶೇಷವಾದ ಬ್ರೌಸರ್ ಅಗತ್ಯ. ಅದಕ್ಕನುಗುಣವಾಗಿ ಗೂಗಲ್ ಈ ಫೀಚರ್ ಅಭಿವೃದ್ಧಿಪಡಿಸಿದೆ. ಡಾರ್ಕ್ ವೆಬ್ ಅನ್ನು ಕೆಲವರು ವೈಯಕ್ತಿಕ ಕಾರಣಕ್ಕೆ ಮತ್ತು ಕಾನೂನಾತ್ಮಕವಾಗಿ ಬಳಸುತ್ತಾರೆ. ಆದರೆ ಸೈಬರ್ ಖದೀಮರು ಈ ವೇದಿಕೆಯನ್ನು ಅಕ್ರಮ ಹಾಗೂ ಹಾನಿಕಾರಕ ಚಟುವಟಿಕೆಗಳಿಗಾಗಿ ಬಳಸುತ್ತಾರೆ.

ಮೇಲ್ ಐಡಿ, ಫೋನ್ ನಂಬರ್, ವಿಳಾಸ ಮತ್ತು ಹುಟ್ಟಿದ ದಿನ ಸೇರಿದಂತೆ ಹಲವು ಮಾಹಿತಿಯನ್ನು ಗೂಗಲ್‌ಗೆ ಅಪ್‌ಡೇಟ್ ಮಾಡಿದ್ದರೆ, ಆ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಡಾರ್ಕ್ ವೆಬ್ ಸ್ಕ್ಯಾನ್ ಮಾಡುತ್ತದೆ. ಒಂದು ವೇಳೆ ಬಳಕೆದಾರರು ಅಪ್‌ಡೇಟ್ ಮಾಡಿದ ಮಾಹಿತಿಯು ಡಾರ್ಕ್ ವೆಬ್‌ನಲ್ಲಿ ಕಂಡರೆ ಆ ಬಗ್ಗೆ ಬಳಕೆದಾರರಿಗೆ ಎಚ್ಚರಿಸುವ ಕಾರ್ಯವನ್ನು ಇದು ಮಾಡುತ್ತದೆ.

ಡಾರ್ಕ್ ವೆಬ್ ರಿಪೋರ್ಟ್‌ನ ಬೇಸಿಕ್ ವರ್ಷನ್ ಉಚಿತವಾಗಿ ಲಭ್ಯವಿದ್ದು, ಹೆಚ್ಚಿನ ಫೀಚರ್‌ಗಳುಳ್ಳ ವರ್ಷನ್ ಅಗತ್ಯವಿದ್ದರೆ ಅದಕ್ಕೆ ಹಣ ಪಾವತಿಸಬೇಕಾಗುತ್ತದೆ.

## ಸ್ಕ್ಯಾನ್ ಮಾಡುವುದು ಹೇಗೆ?

- ಗೂಗಲ್ ಅಪ್ಲಿಕೇಷನ್‌ನ ಇತ್ತೀಚಿನ ಆವೃತ್ತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಿ.
- ಆ್ಯಪ್ ತೆರೆದು ಪ್ರೊಫೈಲ್ ಐಕಾನ್ ಮೇಲೆ ಟ್ಯಾಪ್ ಮಾಡಿ.
- ನಂತರ ಡಾರ್ಕ್ ವೆಬ್ ವರದಿ ಆಯ್ಕೆಯನ್ನು ಒತ್ತಿ.
- ಮುಂದಿನ ಪುಟದಲ್ಲಿ ಕಾಣುವ ‘ರನ್ ಸ್ಕ್ಯಾನ್ ಬಟನ್’ ಟ್ಯಾಪ್ ಮಾಡಿ.
- ಸ್ಕ್ಯಾನ್ ಪ್ರಕ್ರಿಯೆ ಪೂರ್ಣಗೊಳ್ಳುವುದನ್ನು ನಿರೀಕ್ಷಿಸಿ ಮತ್ತು ನಂತರ ಫಲಿತಾಂಶವನ್ನು ಪರಿಶೀಲಿಸಿ. ■

